ಜೆಎಸ್ಎಸ್ ಮಹಾವಿದ್ಯಾಪೀಠ
ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ESTD - 1964
ಊಟಿರಸ್ತೆ, ಮೈಸೂರು-೫೭೦ ೦೨೫
☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 26-01-2014

## ಪ್ರಕಟಣೆಯ ಕೃಪೆಗಾಗಿ

ಮೈಸೂರು ನಗರದ ಊಟಿ ರಸ್ತೆಯ ಜೆಎಸ್ಎಸ್ ಕಾಲೇಜಿನಲ್ಲಿ 65ನೇ ಗಣರಾಜ್ಯೋತ್ಸವ ಸಮಾರಂಭವನ್ನು ದಿನಾಂಕ 26-1-2014ರ ಭಾನುವಾರದಂದು ಏರ್ಪಡಿಸಲಾಗಿತ್ತು.

ಈ ಸಮಾರಂಭದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕುವೆಂಪು ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ನೀಲಗಿರಿ ಎಂ ತಳವಾರ್‌ರವರು ಮಾತನಾಡುತ್ತಾ ಸರ್ವೋದಯದಯದ ಹಿನ್ನೆಲೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಆಶಯಗಳನ್ನು ಪ್ರಸ್ತಾಪಿಸಿದ ಅವರು ಕುವೆಂಪುರವರ ಶ್ರೀಸಾಮಾನ್ಯನ ಗೀತೆಯ ಸಂದೇಶದ ಮಹತ್ವವನ್ನು ಪರಿಚಯಿಸಿದರು.

ವೇದಿಕೆಯಲ್ಲಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ. ಎನ್. ನಾಗರಾಜರವರು, ಅಕಾಡೆಮಿಕ್ ಡೀನ್ ಹಾಗೂ ಎನ್.ಸಿ.ಸಿ ಮೇಜರ್ ಪ್ರೊ. ಎಂ. ಮಹದೇವಪ್ಪರವರು, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎಸ್. ಸೋಮಶೇಖರ್‌ರವರು ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಉಪನ್ಯಾಸಕರಾದ ಶ್ರೀಮತಿ ಸುಮರವರು ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಹೆಚ್.ಟಿ. ಶೈಲಜಾರವರು ಸ್ವಾಗತಿಸಿದರು. ಹಿರಿಯ ಉಪನ್ಯಾಸಕರಾದ ಶ್ರೀ ಎನ್.ಸಿ. ನಾಗರಾಜರವರು ವಂದಿಸಿದರೆ, ಶ್ರೀ ಎಂ.ಎಸ್. ವೆಂಕಟರಾವ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

N. Nagaraj
For ಪ್ರಾಂಶುಪಾಲರು
ಜೆ. ಎಸ್. ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು-570 025

ಗೆ

ಸಂಪಾದಕರು / ವರದಿಗಾರರು

\- - - - - - - - - - - - - - - -

\- - - - - - - - - - - - - - - -